ತೀರ್ಮಾನಿಸಿರುವರೆಂದು ಸಂದೇಶವನ್ನು ನೀಡಿದಳು. ಆ ನಂತರ ಸುಮಾರು ಒಂದು ತಿಂಗಳ ವರೆಗೆ ಆಸಿಫಾ ಕಡೆಯಿಂದ ಯಾವುದೇ ಸೂಕ್ತ ಉತ್ತರ ದೊರಕಲಿಲ್ಲ. ಅಲ್ಲಿಯ ವರೆಗೂ ದಿನಕ್ಕೆ ಹತ್ತು ಸಲ ಉಭಯ ಕುಶಲೋಪರಿಯ ಫೋನ್ ಕರೆಗಳು ಒಳಬಂದು ಹೊರಹೋಗುತ್ತಿದ್ದವು. ಈ ಹಂತದಲ್ಲಿ ರೆಹಮತ್‌ಳಿಗೆ ತಲೆಕೆಟ್ಟಂತಾಗಿತ್ತು.

ಸುಮಾರು ಒಂದು ತಿಂಗಳ ನಂತರ ಆಸಿಫಾಳ ಫೋನ್ ಬಂತು. 'ಮುಬಾರಕ್ ಹೋ ರೆಹಮತ್. ಅನೀಸ್ ಮರಳಿ ಬರುವ ದಿನ ಫಿಕ್ಸ್ ಆಗಿದೆ. ಅವನು ಇನ್ನೇನು ಒಂದು ವಾರದಲ್ಲಿ ಭಾರತಕ್ಕೆ ಬರುತ್ತಾನೆ. ಅವನು ಬಂದ ಮೂರು ದಿನಗಳೊಳಗಾಗಿ ಅವನನ್ನು ನಿಮ್ಮ ಮನೆಗೆ ಕರೆತರುತ್ತೇನೆ.' ರೆಹಮತ್ ಮತ್ತೆ ಸಂತೋಷದ ಉತ್ತುಂಗಕ್ಕೆ ಏರಿದಳು. ಅನೀಸ್‌ನ ಮನೆಗೆ ಯಾವುದೇ ರೀತಿಯಲ್ಲಿ ಸಾಟಿಯಲ್ಲದಿದ್ದರೂ ಮನೆಯ ಇದ್ದ ಅವಸ್ಥೆಯನ್ನೇ ಸಾಕಷ್ಟು ಉತ್ತಮಪಡಿಸಿದಳು. ಮೂಲೆಮೂಲೆಯೂ ಸ್ವಚ್ಛಗೊಂಡಿತು. ಕರ್ಟನ್‌ಗಳನ್ನು ಬದಲಾಯಿಸಿದಳು. ಅಡುಗೆ ಮನೆಯನ್ನು ಓರಣವಾಗಿಸಿದಳು. ಶೌಚಾಲಯವನ್ನು ಲಕಲಕ ಹೊಳೆಯಿಸಿದಳು. ಅಜ್ರಾ ಕೂಡಾ ತನ್ನ ತಾಯಿಗೆ ನೆರವು ನೀಡಲು ಹಿಂದೆಗೆಯಲಿಲ್ಲ. ಆದರೆ, ಒಂದು ವಾರದ ನಂತರ ಮತ್ತೆ ಫೋನ್ 'ಸಾರಿ ರೆಹಮತ್... ಅದೇನೋ ಅನನುಕೂಲವಾಯಿತಂತೆ... ಅವನು ಮರಳಿ ಬರುವುದು ಹದಿನೈದು ದಿನ ತಡವಾಗುತ್ತೆ.' ಮನೆ ಇನ್ನಷ್ಟು ಸ್ವಚ್ಛವಾಯಿತು. ಮನದಲ್ಲಿ ಕಾರ್ಮೋಡಗಳು ಸುಳಿದು ದಟ್ಟೈಸಿದವು. ಮತ್ತೆ ಹದಿನೈದು ದಿನದ ನಂತರ ಇನ್ನೊಂದು ಫೋನ್ 'ಸಾರಿ... ರೆಹಮತ್...' ಇನ್ನೊಂದು ನೆವ, ಮತ್ತೊಂದು ನೆವ, ಮಗದೊಂದು ನೆವ. ಇತ್ತ ರೆಹಮತ್‌ಳ ದುರವಸ್ಥೆ ತೀವ್ರ ಸ್ವರೂಪಕ್ಕೆ ತಿರುಗಿತ್ತು. ಒಂದು ದಿನ ಊಟಕ್ಕೆ ಕೂತಿದ್ದ ಶರೀಫ್ ನಗೆಚಾಟಿಯನ್ನು ಬೀಸಿದ.

'ನೋಡು ರೆಹಮತ್ ಹಿಂದೆ ರಾಜಮಹಾರಾಜರಿಗೆ ಮದುವೆಯಾಗಲೂ ಕೂಡಾ ಪುರುಸೊತ್ತಿರಲಿಲ್ಲ. ಆಗ ಅವರು ರಾಜಭಟರೊಡನೆ ತಮ್ಮ ಕತ್ತಿಯನ್ನು ಕಳಿಸಿ ಕೊಡುತ್ತಿದ್ದರು. ಎಲ್ಲೋ ಇದ್ದ ಮೂರ್ಖ ರಾಜಕುಮಾರಿಯೊಬ್ಬಳು ಆ ಕತ್ತಿಯೊಡನೆ ಮದುವೆಯಾಗಿ ಆ ರಾಜಭಟರೊಡನೆ ಖುದ್ದು ರಾಜನ ಅರಮನೆಗೆ ಬರುತ್ತಿದ್ದಳು' ಎಂದು ಹೇಳಿ ಒಂದು ತೇಲಿಸಿದ ನೋಟವನ್ನು ಮಗಳತ್ತ ಬೀರಿ ನಿಧಾನವಾಗಿ ಅವಳ ಪ್ರತಿಕ್ರಿಯೆಯನ್ನು ಗಮನಿಸುತ್ತಾ ಹೆಂಡತಿಯತ್ತ ತಿರುಗಿ ಆಕೆಯ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಅರೆಹಾಸ್ಯ, ಅರೆಕೋಪವನ್ನು ಬೀರುವ ಧ್ವನಿಯೊಡನೆ ಕೂಡಿ 'ಒಂದು ಕೆಲಸ ಮಾಡಲಿ ಆ ಅನೀಸ್ ಯಾವ ದೇಶದ ರಾಜನೂ ಅಲ್ಲ. ಸಾಫ್ಟ್‌ವೇರ್ ಎಂಜಿನಿಯರ್ ಅಲ್ಲವಾ. ಅದಕ್ಕೆ ಒಂದು ಪೆನ್‌ಡ್ರೈವ್‌ನ್ನು ಅಲ್ಲಿಂದ ಕಳಿಸು ಅಂತ ಹೇಳು. ಅದರ ಜೊತೆಯಲ್ಲಿ ನಮ್ಮ ಅಜ್ರಾನ ಮದುವೆ ಮಾಡಿ ನಾವೇ ಮೇಲೆ ಬಿದ್ದು ಅವಳನ್ನು ಜರ್ಮನಿಗೆ ಕಳಿಸಿ ಕೈತೊಳೆದುಕೊಳ್ಳೋಣ. ಹೇಗೂ ನಮ್ಮ ತಲೆಮೇಲಿರುವ ಜವಾಬುದಾರಿಯಲ್ಲವಾ... ಯಾರಿಗಾದರೂ, ಹೇಗಾದರೂ ದಾಟಿಸಿ ಕೈತೊಳೆದುಕೊಳ್ಳೋಣ.' ಶರೀಫ್‌ನ ಈ ನುಡಿಗಳು ಎಲ್ಲರ ಗಂಟಲಲ್ಲೂ ಸಿಕ್ಕಿಕೊಂಡವು. ರೆಹಮತ್‌ಳ ತುತ್ತು ಒಳಗಿಳಿಯಲಿಲ್ಲ. ಬದಲಿಗೆ ಅಶ್ರುಧಾರೆ ಒಡ್ಡು ಒಡೆದ ಪ್ರವಾಹದಂತೆ ದುಮ್ಮಿಕ್ಕಿತು. ಅವಳ ಅಳು, ಬಿಕ್ಕಳಿಕೆ ಸೆರಗಿನಿಂದ ಮುಖ ಮುಚ್ಚಿ ಕುಳಿತ ಭಂಗಿ ಇವೆಲ್ಲವನ್ನೂ ನೋಡಿ ನಯಾಜ್‌ನ ಹೊಟ್ಟೆಯಲ್ಲಿ ತಿರುಗಣೆಯಾಡಿದಂತಾಯಿತು. ಅವನ ಅಸಹಾಯಕತೆ ಅವನನ್ನೇ ನುಂಗಿ ನೊಣೆಯುವಷ್ಟು ತೀವ್ರವಾದಾಗ ಅವನು ಅನ್ನವನ್ನು ತಟ್ಟೆಯಲ್ಲೇ ಬಿಟ್ಟು ಕೈತೊಳೆದು ಹೊರನಡೆದ.